**ಓ ಎಸ್ 127/2020** **ಡಿ.ಡಬ್ಲೂಃ 1**

/ 83/2021

**ಸಾಕ್ಷಿಯನ್ನು ದಿಃ 29.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಎಸ್.ಕೆ ವಕೀಲರಿಂದಃ-**

ನಾನು ಎಸ್.ಎಸ್.ಎಲ್.ಸಿ ವರೆಗೂ ಓದಿರುತ್ತೇನೆ. ಅಸಲು ದಾವೆ ಸಂಖ್ಯೆ 83/2021 ರಲ್ಲಿನ ದಾವಾ ಐಟಂ ನಂ. 1 ಮತ್ತು 2 ರ ಸ್ವತ್ತುಗಳು ನಮ್ಮ ತಾಯಿ ಪಾರ್ವತಮ್ಮ ರವರ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ಸರ್ವೆ ನಂ. 35 ರಲ್ಲಿ 4 ಎಕರೆ ಮತ್ತು ಸರ್ವೆ ನಂ. 36 ರಲ್ಲಿ 4 ಎಕರೆ ಈ ಎರಡೂ ಜಮೀನು ಗಳು ನಮ್ಮ ಸಹೋದರರಿಗೆ ಪ್ರತ್ಯೇಕವಾಗಿ ಸರ್ಕಾರದಿಂದ ಮಂಜೂರು ಆಗಿದ್ದು ಎಂದರೆ ಸರಿ. ಅಸಲು ದಾವೆ ಸಂಖ್ಯೆ 127/2020 ಯ ವಾದಿಗೆ ಸೋಮಪ್ಪ ಮತ್ತು 3 ನೇ ಪ್ರತಿವಾದಿ ಈಶ್ವರಪ್ಪ ರವರಿಗೆ ಯಾವ ಯಾವ ಸರ್ವೆ ನಂಬರ್ ಜಮೀನು ಮಂಜೂರು ಆಗಿತ್ತು ಎಂದು ನನಗೆ ಗೊತ್ತಿಲ್ಲ.

ಅಸಲು ದಾವೆ ಸಂಖ್ಯೆ 83/2021 ದಾವಾ ಐಟಂ ನಂ. 1 ಮತ್ತು 2 ಸ್ವತ್ತಿಗೆ ಸಂಬಧಿಸಿದಂತೆ ನನ ತಾಯಿ 3 ನೇ ಪ್ರತಿವಾದಿ ಸುಮೇಶ್ ರವರಿಗೆ ದಾನ ಪತ್ರ ಮೂಲಕ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಮೋಸ ಮಾಡಿ ನನ್ನ ತಾಯಿಯಿಂದ ಬರೆಸಿಕೊಂಡಿರುತ್ತಾರೆ ಎನ್ನುತ್ತಾರೆ. ಹಾಗೆ ಮೋಸ ಮಾಡಿ ದಾನ ಪತ್ರ ಬರೆಸಿಕೊಂಡಿದ್ದಾರೆ ಎಂದು ಎ.ಸಿ ನ್ಯಾಯಾಲಯದಲ್ಲಿ ನನ್ನ ತಾಯಿ ಅಬ್ಜಕ್ಷನ್ ಮಾಡಿದ್ದರು. ತಾಯಿಯವರು ಈಗ್ಗೆ 5 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ ದಿನಾಂಕ ತಿಂಗಳು ನೆನಪಿಲ್ಲ. ನನ್ನ ತಾಯಿ ಸಾಯುವ ಪೂರ್ವದಲ್ಲಿ ಅನಾರೋಗ್ಯ ಇತ್ತು, ಆದರೆ ಮನಸ್ಥಿತಿ ಚೆನ್ನಾಗಿ ಇತ್ತು ಎನ್ನುತ್ತಾರೆ. ತಾಯಿ ಸಾಯುವ ಪೂರ್ವದಲ್ಲಿ ನನ್ನ ಬಳಿಯೆ ವಾಸ ಇದ್ದರು, ಸಾಕ್ಷಿ ಪುನಃ ಅದಕ್ಕೂ ಮೊದಲು ಅಣ್ಣನ ಬಳಿ ವಾಸ ಇದ್ದು, ಅವರ ತೊಂದರೆ ಕೊಟ್ಟರು ಎಂದು 3 ವರ್ಷ ನನ್ನ ಬಳಿ ಇದ್ದರು ಎನ್ನುತ್ತಾರೆ. ನನ್ನ ತಾಯಿ ದಾನ ಪತ್ರ ಬರೆದುಕೊಟ್ಟಿದ್ದಾರೆ ಎಂದು ಹೇಳುವ ಕಾಲಕ್ಕೆ ನಮ್ಮ ಹತ್ತಿರ

ಇದ್ದರು ಎಂದರೆ ಸರಿಯಲ್ಲ. ಅಣ್ಣ ಸೋಮಪ್ಪನ ಬಳಿ ಇದ್ದರು ಎನ್ನುತ್ತಾರೆ. ದಾನ ಪತ್ರ ಬರೆದುಕೊಟ್ಟರು ಎಂದು ಹೇಳುವ ಸಂದರ್ಭದಲ್ಲಿ ತಾಯಿ ಆರೋಗ್ಯವಾಗಿದ್ದರು.

ಸೋಮಪ್ಪ ನವರು ಹಾಕಿರುವ ಓ.ಎಸ್ 127/2020 ರಲ್ಲಿನ 10 ಐಟಂ ದಾವಾ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನಾನು ಮತ್ತು ನನ್ನ ತಾಯಿ ಮಾಡಿಕೊಂಡಿರುವಂತಹ ವಿಭಾಗ ಪತ್ರದಲ್ಲಿ ಸದರಿ 10 ಸ್ವತ್ತುಗಳು ಇರುತ್ತವೆ. ಸದರಿ ವಿಭಾಗ ಪತ್ರದಲ್ಲಿ ಸೋಮಪ್ಪ ಆಗಲಿ ಈಶ್ವರಪ್ಪ ಆಗಲಿ ಪಕ್ಷಗಾರರಾಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದಲ್ಲಿ ದೊಡ್ಡಣ್ಣ ಸೋಮಪ್ಪನಿಗೆ ಅಣ್ಣೆಗೆರೆ ಹತ್ತಿರ 9 ಎಕರೆ ಚಿಲ್ಲರೆ ಭಾಗವಾಗಿ ಬಿಡಲಾಗಿತ್ತು, ಈಶ್ವರಪ್ಪ ರವರಿಗೆ ಬಿ.ಆರ್ ಕಾವಲು ಹತ್ತಿರ 8 ಎಕರೆ ಜಮೀನು ಭಾಗವಾಗಿ ಬಿಡಲಾಗಿತ್ತು.

ನನಗೆ ಕನ್ನಡ ಓದಲು ಬರೆಯಲು ಸರಿಯಾಗಿ ಗೊತ್ತಾಗುವುದಿಲ್ಲ. ನಾನು ಹಾಜರು ಪಡಿಸಿರುವ ವಿಭಾಗ ಪತ್ರದಲ್ಲಿ ಯಾವ ಯಾವ ಸರ್ವೆ ನಂಬರ್ ಗಳನ್ನು ಯಾರ್ಯಾರಿಗೆ ಕೊಡಲಾಗಿತ್ತು ಎಂದು ನಮೂದಾಗಿರುವುದು ತೋರಿಸಲಾಗುತ್ತದೆಯೆ ಎಂದರೆ ಆಗುವುದಿಲ್ಲ ಎನ್ನುತ್ತಾರೆ. ವಿಭಾಗ ಪತ್ರ ಆಯಿತು ಎಂದು ಹೇಳುವ 6-7 ತಿಂಗಳ ನಂತರ ನನ್ನ ತಾಯಿ ತೀರಿಕೊಂಡಿರುತ್ತಾರೆ. ಸದರಿ ವಿಭಾಗ ಪತ್ರದಲ್ಲಿ ಸೋಮಪ್ಪ, ಈಶ್ವರಪ್ಪ, ಹಾಗೂ ತಾಯಿ ರವರ ಸ್ವಯಾರ್ಜಿತ ಸ್ವತ್ತುಗಳು ಸೇರಿಲ್ಲ ಎಂದರೆ ಸರಿ. ಓ.ಎಸ್ ನಂ. 83/2021 ರಲ್ಲಿ ಐಟಂ ನಂ. 1 ಮತ್ತು 2 ರಲ್ಲಿ ಖಾತೆಗಳು ಸುಮೇಶ್ ರವರ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿನ ಐಟಂ ನಂ. 3 ಮತ್ತು 4 ರ ಖಾತೆಗಳು ಸೋಮಪ್ಪ ಮತ್ತು ಈಶ್ವರಪ್ಪ ರವರ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ಸದರಿ 4 ಆಸ್ತಿಗಳು ಹೊರತು ಪಡಿಸಿ ಉಳಿದ ಆಸ್ತಿಗಳು ಅಂದರೆ ಓ.ಎಸ್ 127/2020

ರಲ್ಲಿ ಐಟಂ ನಂ.1 ರಿಂದ 10 ನನ್ನ ಮತ್ತು ಉಳಿದ ಪ್ರತಿವಾದಿಗಳ ನಡುವೆ ಸಮವಾಗಿ ಭಾಗವಾಗಬೇಕಾಗುತ್ತದೆ ಎಂದರೆ ಸರಿ.

ಲಿಖಿತ ತಕರಾರಿನಲ್ಲಿ 35 ಲಕ್ಷ ರೂ. ಹಣವನ್ನು ವೈಯಕ್ತಿಕವಾಗಿ ವಾದಿಯೇ ಇಟ್ಟುಕೊಂಡಿದ್ದರು ಎಂದು ಹೇಳಿದ್ದು, ಆ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದು, ಸಾಕ್ಷಿ ಮುಂದುವರೆದು ತಂದೆ ಜನಗಳಿಗೆ ಹಣವನ್ನು ಕೊಟ್ಟಿದ್ದು, ಅದನ್ನು ವಾಪಸ್ಸು ತೆಗೆದುಕೊಳ್ಳುವ ಸಮಯದಲ್ಲಿ ಅಣ್ಣ ಸೋಮಪ್ಪರವರೆ ಹಣವನ್ನು ಪಡೆದು ನನ್ನ ತಂದೆ ಅನಕ್ಷರಸ್ಥರಾದ ಕಾರಣ ಅಣ್ಣ ಸೋಮಪ್ಪ ನವರೇ ದಾಖಲೆಯನ್ನು ಸಹ ಅವರೆ ಬರೆದಿಟ್ಟುಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ದಿಃ 24.06.2020 ರಂದು ವಿಭಾಗ ಪತ್ರ ಮಾಡಿಕೊಂಡ ನಂತರ ವಾದಿ ಸೋಮಪ್ಪ ನವರ ಗಮನಕ್ಕೆ ಬಂದಿರುತ್ತದೆ ಎಂದರೆ ಸರಿ. ಆನಂತರ ವಾದಿ ಈ ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿ.

2020 ರಲ್ಲಿ ಪಾಂಚಾಯಿತಿ ಪಾಲುಪಾರಿಕತ್ ಆಗಿತ್ತು. ತಾಯಿ, ಅಣ್ಣ ಸೋಮಪ್ಪ ಮತ್ತು ಅಂದನಹಳ್ಳಿ ಸೋಮಶೇಖರ ಮತ್ತು ನಮ್ಮ ತಾಯಿಯ ತಮ್ಮ ಬಸವರಾಜು, ನನ್ನ ತಂದೆಯ ಅಣ್ಣನ ಮಗ ಬಸವರಾಜು, ಊರಿನ 3 ಜನ, ರಾಮು, ಮೈಸೂರು ರಾಜಣ್ಣ, ಮತ್ತು ಚಿಕ್ಕಹೆಜ್ಜೂರುನವರು ಇನ್ನೊಬ್ಬರು ಎಲ್ಲರೂ ಸೇರಿದ್ದರು. ಪಂಚಾಯಿತಿ ಪಾಲುಪಾರಿಕತ್ ಆಗಿದೆ ಎಂದು ಹೇಳಿದ್ದು, ಅಲ್ಲಿ ಬರವಣಿಗೆ ಮೂಲಕ ಆಗಿರುತ್ತದೆ, ಆದರೆ ನೊಂದಣಿ ಆಗಿರುವುದಿಲ್ಲ. ನಿಡಿ. 28 ರ ದಾಖಲೆಯನ್ನು ಈ ಕೇಸ್‌ಗಾಗಿ ಸೃಷ್ಟಿಸಿ ತಂದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಸೋಮಪ್ಪ ನವರ ಒಟ್ಟು ಕುಟುಂಬದ ಆಸ್ತಿಯ ವಿಚಾರವಾಗಿ ವಿಭಾಗಪತ್ರ ಆಗಿಲ್ಲ ಎಂದರೆ ಸರಿಯಲ್ಲ, ವಿಭಾಗವನ್ನು ನನ್ನ ಅಣ್ಣ, ತಾಯಿ ರವರು ಸೇರಿ ಮಾಡಿಕೊಟ್ಟಿದ್ದರು ಎನ್ನುತ್ತಾರೆ. ನಿಡಿ. 34 ರ ಅರ್ಜಿಯನ್ನು ನನ್ನ ತಾಯಿ

ಮೂಲಕ ನಾನೆ ಬಲವಂತವಾಗಿ ಎ.ಸಿ ನ್ಯಾಯಾಲಯಕ್ಕೆ ದೂರು ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. 2015 ರಲ್ಲಿ ದಾನ ಪತ್ರದ ಬರೆದುಕೊಟ್ಟ ನಂತರದಲ್ಲಿ ತಾಯಿ ಸಾಯುವ ಪೂರ್ವದಲ್ಲಿ ಅವರವರ ಆಸ್ತಿಯಲ್ಲಿ ಅವರವರೇ ಸ್ವಾಧೀನ ಇದ್ದುಕೊಂಡು ಯಾವುದೆ ತಕರಾರು ಇರಲಿಲ್ಲ ಎಂದರೆ ಸರಿ.

ಓ.ಎಸ್ 83/2021 ರಲ್ಲಿ ನಮೂದಿರುವ ಆಸ್ತಿಗಳಲ್ಲಿ ನನಗೆ ಯಾವುದೆ ಆಸ್ತಿ ಬರುವುದಿಲ್ಲ, ಅದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನನಗೂ ಮೂರನೇ ಎಂದು ಭಾಗ ಬರಬೇಕು ಎಂದು ನುಡಿಯುತ್ತಾರೆ. ವಾದಿಗಳ ಭಾಗವನ್ನು ತಪ್ಪಿಸಲು ಓ.ಎಸ್ 83/2021 ರ ಎದುರು ದಾವೆಯನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಹೆಸರಿನಲ್ಲಿ ಜಮೀನು ಇದ್ದ ಕಾರಣ ಅವರ ಹೆಸರಿಗೆ ಗ್ರ್ಯಾಂಟ್ ಆಗಿತ್ತು ಎಂದು ನುಡಿಯುತ್ತಾರೆ. ಓ.ಎಸ್ 83/2021 ರಲ್ಲಿನ ಐಟಂ ನಂ. 3 ಮತ್ತು 4 ತಂದೆ ಹೆಸರಿನಲ್ಲಿ ಇತ್ತು ಎಂದು ತೋರಿಸಲು ಯಾವುದೆ ದಾಖಲೆ ಇಲ್ಲ. ಸದರಿ ಸ್ವತ್ತಿನಲ್ಲಿ ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆ ಇಲ್ಲ. ಅದರೆ ಸದರಿ ಸರ್ವೆ ನಂ. ಇದುವರೆಗೂ ಯಾರ ಹೆಸರಿಗೂ ದಾಖಲೆ ಆಗದೆ ಹಾಗೆ ಇರುತ್ತದೆ ಎನ್ನುತ್ತಾರೆ.

ನನ್ನ ತಾಯಿ ಸಹಿ ಮಾಡುತ್ತಿದ್ದರು. ನಿಡಿ. 24 ರ ಅರ್ಜಿಯಲ್ಲಿ ತಾಯಿಯವರ ಸರಿ ಇಲ್ಲ ಎಂದರೆ ಸರಿ. ಇದನ್ನು ಕೇಸಿಗೆ ಸೃಷ್ಟಿಸಿಕೊಂಡು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಓ.ಎಸ್ 127/2020 ರಲ್ಲಿ ವಾದಿ ಭಾಗ ಪಡೆಯಲು ಅರ್ಹರು, ಓ.ಎಸ್ 83/2021 ರಲ್ಲಿ ಯಾವುದೆ ಭಾಗ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಅದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ವಕೀಲರಿಂದಃ</u>**

ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.